
ಬೆರ್ರಿ ಹೆಕ್ಕುವ ಆಟ


ಹಬೆಯಾಡುವ ಸ್ನಾನಗೃಹ

ಹಾಂ, ಇಲ್ಲಿ ಮನುಷ್ಯರ ಸಹನಶೀಲತೆಯನ್ನಷ್ಟೇ ಪರಿಗಣಿಸಲಾಗುತ್ತದೆ. ಆಟಗಾರರ ಅಂಡಿಗೆ ಸಿಕ್ಕಿ ಅಪ್ಪಚ್ಚಿಯಾಗುವ ಇರುವೆಗಳಿಗೆ ಅನುಕಂಪವೂ ಇಲ್ಲ, ಬಹುಮಾನದ ಪ್ರಶ್ನೆ ಮೊದಲೇ ಇಲ್ಲ.

## ಬೆರ್ರಿ ಹೆಕ್ಕುವ ಆಟ

ಬೇಸಿಗೆಯಲ್ಲಿ ಕಾಡುಗಳಲ್ಲಿ ಬಗೆ ಬಗೆಯ ಬೆರ್ರಿ ಹಣ್ಣುಗಳು ಕೆಳಗೆ ಬಿದ್ದು ಮಣ್ಣುಪಾಲಾಗುತ್ತವೆ. ಲಿಂಗಾನ್ ಬೆರ್ರಿ, ಬ್ಲೂಬೆರ್ರಿ, ಬ್ಲಾಕ್‌ಬೆರ್ರಿ, ಸೀ ಬಕ್‌ಥ್ರೋನ್ ಬೆರ್ರಿಸ್, ರಾಸ್ಪೆಬೆರ್ರಿಸ್ ಹೀಗೆ. ಇವುಗಳಲ್ಲಿ ಶೇ. 5ರಷ್ಟು ಹಣ್ಣುಗಳು ಉಪಯೋಗಕ್ಕೆ ಬಾರದೇ ಹಾಳಾಗುತ್ತವೆ. ಈ ಹಣ್ಣನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಈ ಆಟವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತದೆ. ಒಂದು ಗಂಟೆಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆರ್ರಿ ಹೆಕ್ಕುವ ತಂಡಕ್ಕೆ ಪ್ರಶಸ್ತಿ.


ಮೊಬೈಲ್ ಫೋನ್ ಎಸೆಯುವ ಆಟ

## ಮೊಬೈಲ್ ಎಸೆಯುವ ಆಟ

ಬೇಡದ ವಸ್ತುಗಳನ್ನು ಎಸೆಯುವುದು ಎಲ್ಲೆಡೆ ಕಾಣಬಹುದಾದ ಸಹಜ ವಿದ್ಯಮಾನ. ಆದರೆ, ಮೊಬೈಲ್ ಫೋನ್‌ಗಳನ್ನು ಎಸೆಯುವ ಆಟವೂ ಇದೆ. ದುಬಾರಿ ಮೊಬೈಲ್‌ಗಳನ್ನು ಎಷ್ಟು ದೂರ ಎಸೆಯಲಾಗುತ್ತದೊ ಅವರೇ ವಿಜೇತರು. ಈ ಆಟದ ಉದ್ದೇಶ ಸರಳವಾದುದು: ವಸ್ತು ಎಷ್ಟೇ ದುಬಾರಿಯಾಗಿದ್ದರೂ ಅದೊಂದು ದಿನ ಹಾಳಾಗುವುದು ಖಚಿತ ಎನ್ನುವ ಸತ್ಯವದು. 'ಜೀವನ ನಶ್ವರ' ಎನ್ನುವ ಪಾಠ ಕಲಿಕೆಗೆ ಶುಲ್ಕವೂ ದುಬಾರಿಯೇ!

## ಗಾಳಿಯಲ್ಲಿ ಗಿಟಾರ್

ಗಿಟಾರ್ ಕಲಿಯಲಿ ಬಿಡಲಿ; ಜೀವನದಲ್ಲಿ ಒಮ್ಮೆಯಾದರೂ ಗಿಟಾರ್ ಹಿಡಿದುಕೊಂಡಂತೆ ಭಾವಿಸಿ, ಬಾರಿಸುವ ಖಯಾಲಿ ಬೆಳೆಸಿಕೊಂಡವರು ಸಾಕಷ್ಟು ಮಂದಿಯಿದ್ದಾರೆ. ಆದರೆ, ಗಿಟಾರ್ ಜೊತೆಗಿನ ಸಾಂಗತ್ಯವೇ ಕ್ರೀಡೆಯ ರೂಪ ಪಡೆದಿದೆ. ಇದರಲ್ಲಿ ಸ್ಪರ್ಧಿಸುವವರು ಮೊದಲ ಸುತ್ತಿನಲ್ಲಿ ಅವರಿಷ್ಟದ ಹಾಡಿಗೆ ಗಿಟಾರ್ ಬಾರಿಸುತ್ತಾರೆ. ಎರಡನೇ ಸುತ್ತಿನಲ್ಲಿ ಸ್ಪರ್ಧಿಯು ಬಾರಿಸುವ ಹಾಡನ್ನು ಗ್ರಹಿಸಿ, ಉಳಿದವರು ಸಾಥ್ ನೀಡಬೇಕು. ತೀರ್ಪುಗಾರರು ನೋಡಿ, ಅಂಕ ನೀಡುತ್ತಾರೆ.

## ಸ್ನಾನದೊಂದಿಗೆ ಬೇಟ, ಅಲ್ಲಲ್ಲ ಆಟ!

ಫಿನ್ಲೆಂಡ್ ಸ್ನಾನಗೃಹಗಳಿಗೆ ಪ್ರಸಿದ್ಧಿ. ಹಬೆಯಾಡುವ ಸ್ನಾನಗೃಹಗಳಲ್ಲಿ ಅತಿ ಹೆಚ್ಚು ಕಾಲ ಉಳಿದುಕೊಳ್ಳುವ ಆಟ ಅಲ್ಲಿ ಜನಪ್ರಿಯ. 110 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶವಿರುವ ಸ್ನಾನಗೃಹದಲ್ಲಿ ಸಹಿಷ್ಣುಗಳಾಗಿ ಉಳಿದಕೊಂಡವರು ವಿಜೇತರಾಗುತ್ತಾರೆ.